ಇದು ನಿಮ್ಮ ನೀತಿಗೆ ವಿರೋಧ ಆಲ್ಲವೇ ಎಂದು ಕೇಳಿದರೆ, ಅವರು ಆಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನೀವು ಸಿಂಧಿ ಜನಾಂಗದವರು ಶಾಲೆ ಪ್ರಾರಂಭ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಶಾಲೆ ಕೊಡಬೇಕು. ಆದೇ ರೀತಿ ಜೈನರು ಶಾಲೆ ಕೇಳಿದರೆ ಕೊಡಬೇಕು. ಉರ್ದು ಶಾಲೆ ಪ್ರಾರಂಭ ಮಾಡುತ್ತೇವೆಂದು ಅನುಮತಿ ಕೇಳಿದರೆ ಅಂಥವರಿಗೆ ಅನುಮತಿ ಕೊಡಬೇಕು. ಸಂವಿಧಾನದ ಹಕ್ಕಿನ ಪ್ರಕಾರ ಅವರಿಗೆ ರಕ್ಷಣೆ ಕೊಡಬೇಕು. ಅಲ್ಪಸಂಖ್ಯಾತರು ಶಾಲೆಗಳನ್ನು ಪ್ರಾರಂಭ ಮಾಡಲಿಕ್ಕೆ ಕರ್ನಾಟಕ ಸರ್ಕಾರದವರು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶಾಲೆಗಳನ್ನು ತೆರೆಯಲು ಪೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಸರ್ಕಾರ ಅಲ್ಪಸಂಖ್ಯಾತರಿಗೋಸ್ಕರ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದೆ. ಬಂದು ಪ್ರಶ್ನೆ ಏನು ಆಗಿದೆ ಎಂದರೆ, ಕೆಲವು ಕಡೆ ಅರ್ಜಿ ಹಾಕಿದ್ದಾರೆ. ಕೆಲವು ಕಡೆ ಅರ್ಜಿಗಳು ರಿಜೆಕ್ಟ್ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಇದಕ್ಕೆ ಕಾರಣ ಏನೆಂದರೆ ಅಲ್ಲಿ ಒಂದು ಶಾಲೆ ಇರುತ್ತದೆ ಸರ್ಕಾರಿ ಶಾಲೆ ಇರಬಹುದು ಅಥವಾ ಖಾಸಗಿ ಶಾಲೆ ಇರಬಹುದು. ಅಲ್ಲೇ ಇನ್ನೊಂದು ಶಾಲೆ ಬೇಕೆಂದು ಅರ್ಜಿಯನ್ನು ಹಾಕಿದಾಗ ನಮಗೆ ತೊಂದರೆಯಾಗುತ್ತದೆ, ಕಷ್ಟವಾಗುತ್ತದೆ. ಎರಡನೆಯದಾಗಿ ಆದಕ್ಕೆ ಎಲ್ಲಾ ರೀತಿಯ ಇನ್‌ಫಾಸ್ಟ್ರಕ್ಚರ್ಸ್ ಇರಬೇಕು. ಮುಖ್ಯವಾಗಿ ಕಟ್ಟಡ ಇರಬೇಕು ಎಂದಿದೆ. ಸಂವಿಧಾನದ ೩೧ನೇ ಆರ್ಟಿಕಲ್ ಪ್ರಕಾರ ಅಲ್ಪಸಂಖ್ಯಾತರ ಹಿತರಕ್ಷಣೆ ಆಗಬೇಕು. ನಿಜ. ಆದರೆ ಎಲ್ಲಿ ಆವಶ್ಯಕತೆ ಇದೆಯೋ ಅಲ್ಲಿ ಈಗಾಗಲೇ ಕೊಟ್ಟಿದ್ದೇವೆ. ಬೇರೆ ಕಡೆಗಳಲ್ಲಿ, ಅಲ್ಲಿ ಈಗಾಗಲೇ ಶಾಲೆ ಇದ್ದಾಗ, ಅಂಥವರ ಅರ್ಜಿ ತಿರಸ್ಕೃತವಾಗಿದ್ದಿರಬಹುದು. ಆದರೆ ಯಾವುದೇ ರೀತಿಯ ತೊಂದರೆಯನ್ನು ಮಾಡಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆಯ ಮತ್ತು ಎರಡನೆಯ ಹಂತ

೧೨೮ (೭೨) ಶ್ರೀ ಆರ್. ಪೆಂಟರಾಮಯ್ಯ (ಮಾಳವಾಗಿಲು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರ ಈಗಾಗಲೇ ಕೈಗೊಂಡಿರುವ ಯೋಜನೆಗಳ ಪೈಕಿ ಕೃಷ್ಣಾ ನದಿಯ ೧ನೇ ಹಂತ ಮತ್ತು ೨ನೇ ಹಂತದಲ್ಲಿ ಎಷ್ಟು ನೀರನ್ನು ಹೊಸದಾಗಿ ಉಪಯೋಗಿಸಲಾಗಿದೆ. ಇನ್ನು ಉಪಯೋಗಿಸಬೇಕಾದ ನೀರಿನ ಪ್ರಮಾಣ ಎಷ್ಟು?

ಆ) ಕೃಷ್ಣಾ ಬಲದಂಡೆ ಯೋಜನೆಯನ್ನು ಸರ್ಕಾರದವರು ಯಾವಾಗ ಕಾರ್ಯಗತಗೊಳಿಸಿದರು?

ಇ) ಈಗ ಈ ಯೋಜನೆಯು ಯಾವ ಹಂತದಲ್ಲಿದೆ?

ಈ) ವಿಶ್ವಬ್ಯಾಂಕ್ ಇದಕ್ಕೆ ಸಾಲ ನೀಡಲು ನಿರಾಕರಿಸುತ್ತಿದೆಯೆ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟದಲ್ಲಿ ೧೧೫ ಟಿ.ಎಂ.ಸಿ. ಮತ್ತು ಎರಡನೇ ಘಟ್ಟದಲ್ಲಿ ೫೪ ಟಿ.ಎಂ.ಸಿ. ನೀರನ್ನು ಉಪಯೋಗಿಸಬೇಕಾಗಿದೆ. ಮೊದಲ ಘಟ್ಟವನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತದೆ. ಮೊದಲ ಹಂತದಲ್ಲಿ ೨೯ ಟಿ.ಎಂ.ಸಿ. ಎರಡನೇ ಹಂತದಲ್ಲಿ ೪೧ ಟಿ.ಎಂ.ಸಿ. ಮತ್ತು ಉಳಿದ ಪ್ರಮಾಣವನ್ನು ಮೂರನೆಯ ಹಂತದಲ್ಲಿ ಉಪಯೋಗಿಸಲಾಗುವುದು.

ಆ) ಕೃಷ್ಣಾ ಬಲದಂಡೆ ಯೋಜನೆ ಎಂಬ ಯಾವ ಯೋಜನೆಯೂ ಇಲ್ಲ. ಆದರೆ ಬಸವ ಸಾಗರದಿಂದ (ನಾರಾಯಣಪುರ ಜಲಾಶಯ) ಎರಡನೆಯ ಘಟ್ಟದಲ್ಲಿ ಬಲದಂಡೆ ಕಾಲುವೆ ನಿರ್ಮಾಣ ಮಾಡಲು ಯೋಜಿಸಲಾಗಿದೆ. ಇದರ ಸರ್ವೆ ಕಾರ್ಯ ನಡೆದಿದೆ.

ಇ) ಮೊದಲ ಘಟ್ಟವು ಮಂಜೂರಾಗಿದ್ದು ಪ್ರಗತಿಯಲ್ಲಿದೆ. ನಾರಾಯಣಪುರ ಆಣೆಕಟ್ಟು ಪೂರ್ಣಗೊಂಡಿದ್ದು ಆಲಮಟ್ಟಿ ಆಣೆಕಟ್ಟು ಪ್ರಗತಿಯಲ್ಲಿದೆ. ನಾರಾಯಣಪುರ ಎಡದಂಡೆ ಕಾಲ್ವೆ ಮತ್ತು ಶಹಾಪುರ ಉಪಕಾಲುವೆ ಪೂರ್ಣಗೊಳ್ಳುವ ಹಂತದಲ್ಲಿವೆ. ಡಿಸೆಂಬರ್ ೧೯೮೬ ಕೊನೆಯ ವರೆಗೆ ೪೦೧.೪೨ ಕೋಟಿ ರೂ.ಗಳು ವಿಚ್ಚಾಗಿದ್ದು ೯೫,೧೫೮ ಹೆಕ್ಟೇರುಗಳಿಗೆ ನೀರಾವರಿ ಅವಕಾಶ ಒದಗಿಸಲಾಗಿದೆ.

ಈ) ಮೊದಲ ಹಂತವನ್ನು ವಿಶ್ವಬ್ಯಾಂಕ್ ನೆರವಿನೊಡನೆ ಈಗಾಗಲೇ ಕಾರ್ಯಗತಗೊಳಿಸಲಾಗಿದ್ದು ಎರಡನೇ ಹಂತಕ್ಕೆ ವಿಶ್ವಬ್ಯಾಂಕ್ ನೆರವು ದೊರಕಿಸಿಕೊಳ್ಳಲು ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್‌ನವರೊಡನೆ ಮಾತುಕತೆಗಳು ನಡೆದಿವೆ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ರಾಜಗೌಡರು ಮಾನ್ಯ ಸಚಿವರು ಉತ್ತರ ಕೊಡುತ್ತಾ ೫೫೬ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ ಮತ್ತು ಗೋದಾವರಿಯಿಂದ ಬರುವ ೨೫ ಟಿ.ಎಂ.ಸಿ. ನೀರು ಬರಬೇಕಾಗಿದೆ ಎಂದು ಹೇಳಿದ್ದಾರೆ. ಇದರಿಂದ ಪೂರ್ತಿ ನೀರನ್ನು ಉಪಯೋಗಿಸಿಕೊಂಡಿಲ್ಲ ಎಂಬ ಅರ್ಥ ಬರುತ್ತದೆ. ೧೧೯ ಟಿ.ಎಂ.ಸಿ.ಯಲ್ಲಿ ಬಳಸಿರುವುದು ೫೫ ಟಿ.ಎಂ.ಸಿ. ಅಲ್ಲಿಗೆ ಅರ್ಧ ಭಾಗ ಕೂಡ ಉಪಯೋಗಿಸಿಲ್ಲ. ಇದಾದ ಮೇಲೆ ೨ನೇ ಹಂತದಲ್ಲಿ ೪೧ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಾಗುವುದು ಮತ್ತು ಸರ್ವೆ ಕಾರ್ಯ ನಡೆದಿದೆ ಎಂದು ಹೇಳಿದ್ದಾರೆ. ನಾನು ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದೆ. ವಿಶ್ವಬ್ಯಾಂಕ್ ನೆರವು ಎರಡನೇ ಹಂತಕ್ಕೆ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಕೊಡುತ್ತಾರೆ ಎಂದು ಕೂಡ ಉತ್ತರದಲ್ಲಿ ಹೇಳಿಲ್ಲ. ಜೊತೆಗೆ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. "A blurry of activity is seen these days in the otherwise silent valleys of Nallamalai forest ranges and eastern ghats in Rayalaseema Region of Andhra Pradesh." ಕೇಂದ್ರ ಸರ್ಕಾರದವರು ಪರ್ಮಿಷನ್ ಕೊಡಲಿ ಅಥವಾ ಕೊಡದೇ ಹೋಗಲಿ, ೧೯೯೦ರ ವೇಳೆಗೆ ಇದನ್ನು ಪೂರ್ತಿಗೊಳಿಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ನೋಡಿದರೆ ಮಾನ್ಯ ಸಚಿವರು.....

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಬಹಳ ಉದ್ದವಾಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನೂ ಸುಮಾರು ೫೫ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡಿಲ್ಲ. ಆದ್ದರಿಂದ ಯೋಜನೆ ಕೂಡ ಪೂರ್ತಿಯಾಗಿಲ್ಲ. ಇದು ನಿಧಾನ ಮಾಡಿರುವುದರಿಂದ ಒರಿಜಿನಲ್ ಎಸ್ಟಿಮೇಶನ್ ಎಷ್ಟು ಇತ್ತು ಮತ್ತು ಈಗ ಎಷ್ಟು ಆಗಿದೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ ಒಂದು ಮಾತ್ರ ಹೇಳುತ್ತೇನೆ. ನೀರಾವರಿ ಇಲಾಖೆ ಮೇಲೆ ತುಂಬಾ ಚರ್ಚೆ ಮಾಡಬಹುದಿತ್ತು. ಇಪತ್ತು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಅವರು ಏನು ಓದಿದ್ದಾರೋ ಅದನ್ನು ನಾನೂ ಓದಿದ್ದೇನೆ. ಸನ್ಮಾನ್ಯ ಸದಸ್ಯರ ಕಳವಳ ಅರ್ಥವಾಗುತ್ತದೆ. ನಮ್ಮ ಭಾಗದ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕಾಗಿದ್ದರೆ ಬಗ್ಗೆ ಸರ್ಕಾರ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು ಎನ್ನುವಷ್ಟಕ್ಕಾಗಿದ್ದು ಅವರ ಪ್ರಶ್ನೆಯು ಹಿನ್ನೆಲೆ. ಈ ವಿಷಯದಲ್ಲಿ ಹಲವಾರು ಸನ್ಮಾನ್ಯ ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಸರ್ಕಾರ ತನ್ನ ಅಭಿಪ್ರಾಯವನ್ನು ಪ್ರಕ್ಟಮಾಡಿದೆ. ಮತ್ತೊಂದು ಸಾರಿ ಸ್ಪಷ್ಟೀಕರಣ ಮಾಡಬೇಕೆಂದು ಇಚ್ಛೆ ಇದ್ದರೆ, ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಮೊನ್ನೆ ತಾನೆ ಕೇಂದ್ರದಲ್ಲಿ ನೀರಾವರಿ ಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಎಲ್ಲಾ ಮಂತ್ರಿಗಳನ್ನೂ ಭೇಟಿ ಮಾಡಿ ಒಂದು ಹಂತಕ್ಕೆ ತಲುಪಿದ್ದೇವೆ. ಸೆಕೆಂಡ್ ಫೇಸಿಗೆ ೫೫೧ ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿಗೆ ಪ್ರೊಜೆಕ್ಟ್ ಮಾಡಿದ್ದೇವೆ. ಇದಕ್ಕೆ ಕ್ಲಿಯರೆನ್ಸ್ ಸಿಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ತನ್ನ ಕಡೆಗೆ ಆಗಬೇಕಾದಂಥ ಪೂರ್ವಭಾವಿ ಕ್ರಮಗಳನ್ನು ಮುಂಜಾಗ್ರತೆಕೊಟ್ಟಿದೆ. ವರ್ಲ್ಡ್ ಬ್ಯಾಂಕಿಗೆ ಸೂಚನೆ ಮಾಡಿದ್ದಾರೆ. ಟೆಕ್ನಿಕಲ್ ಆಗಿ ಕ್ಲಿಯರ್ ಮಾಡಿದ್ದೇವೆ. ಕೇಂದ್ರ ಪರಿಸರ ಖಾತೆಯು ಕ್ಲಿಯರೆನ್ಸ್ ಕೂಡ ಸಿಕ್ಕಿದೆ. ಈ ಕೆಲಸಕ್ಕೆ ಹಣ ಕೊಡತಕ್ಕಂತಾದ್ದಕ್ಕೆ ಅಪ್ರೈಸಲ್ ಕಮಿಟಿ ಬರಬೇಕಾಗುತ್ತದೆ. ಅದು ಇನ್ನು ಒಂದು ತಿಂಗಳಲ್ಲಿ ಬರುವ ಸಾಧ್ಯತೆ ಇದೆ. ೧೯೮೭-೮೮ರಲ್ಲಿ ವರ್ಲ್ಡ್ ಬ್ಯಾಂಕ್ ನೆರವು ಸಿಗುವುದರಲ್ಲಿ ನಮಗೆ ಪೂರ್ಣ ವಿಶ್ವಾಸ ಇದೆ.

ಎರಡನೆಯದು, ಎಲ್ಲಾ ನೀರನ್ನು ಅವರು ಹೇಗೆ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಬಹಳ ದೊಡ್ಡ ಕೆಲಸ. ಬರೀ ಮಾತಿನಿಂದ ಹೇಳಿದರೆ ಪ್ರಯೋಜನವಿಲ್ಲ. ಅದು ಕೃತಿಯಿಂದ ಆಗಬೇಕು, ಆಗ, ಅದನ್ನು ಒಪ್ಪುತ್ತೇನೆ. ಹಿಂದಿನ ಕತೆ ನಮಗೆ ಬೇಡ. ನಮ್ಮ ಮುಂದಿರತಕ್ಕಂತಾದ್ದು ಕರ್ತವ್ಯ. ಆ ಕರ್ತವ್ಯ ಮಾಡುವುದಕ್ಕೆ ನನ್ನ ಶಕ್ತಿ ವಿಾರಿ ಶ್ರಮಿಸುತ್ತೇನೆ ಎನ್ನುವುದನ್ನು ಮಾತ್ರ ಹೇಳುತ್ತೇನೆ. ಸರ್ಕಾರ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ೭೫೪ ಟಿ.ಎಂ.ಸಿ. ನೀರನ್ನು

ಉಪಯೋಗ ಮಾಡತಕ್ಕಂತಾದ್ದು ಒಂದು ಕಡೆ. ಆದರೆ ಸರ್ಪ್ಲಸ್ ನೀರನ್ನು ನಾವು ದಕ್ಕಿಸಿಕೊಳ್ಳುತ್ತೇವೆಂದು ಅವರು ಹೊರಟಿದ್ದರೆ, ಆಥವಾ ಆ ಒಂದು ಹಕ್ಕನ್ನು ನ್ಯಾಪನೆ ಮಾಡಬೇಕೆಂದು ತಿಳಿದುಕೊಂಡಿದ್ದರೆ ಅದು ಸಾಧ್ಯವಾಗುವುದಿಲ್ಲ. ಆಂಧ್ರದಲ್ಲಿ ಅವರು ಭಾಷಣ ಮಾಡಿದುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಅಲ್ಲಿ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಅಲ್ಲಿಯೂ ಕೂಡ ನೀರಾವರಿ ಮಂತ್ರಿಗಳಿಗೆ ಪ್ರಶ್ನೆ ಕೇಳಿ, ಅವರಿಂದ ಉತ್ತರ ಪಡೆಯುತ್ತಾರೆ. ನಮ್ಮ ನ್ಯಾಯಾಧೀಶರು ಕೊಟ್ಟ ತೀರ್ಪಿನ ಪ್ರಕಾರ ಯಾವುದೇ ಕಾರಣದಿಂದ ಆ ಒಂದು ಹಕ್ಕು ಬರುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ,—ಮೊದಲು ಎಷ್ಟಿಮೇಟ್ ಎಷ್ಟಿತ್ತು, ಈಗ ಎಸ್ಕಲೇಷನ್ ಎಷ್ಟಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ.—ಇದು ಒಂದೊಂದು ಹಂತಕ್ಕೂ ಬೇರೆ ಬೇರೆ ಆಗುತ್ತದೆ. ಒಂದು ಕಡೆ ೧೦೭೦ ಕೋಟಿ ಇರಬಹುದು. ಇನ್ನೊಂದು ೫೫೦ ಕೋಟಿ ಇರಬಹುದು. ಇದು ಸ್ಟೇಜಸ್ ಟು ಸ್ಟೇಜಸ್ ಬೇರೆ ಆಗುತ್ತದೆ.

ವಿಕ್ಟೋರಿಯ ಆಸ್ಪತ್ರೆಗಾಗಿ ಬಹುಮಹಡಿ ಕಟ್ಟಡ

೧೩೦ (೪೭೯) ಶ್ರೀ ಕೆ. ಜೆ. ಜಾರ್ಜ್ (ಭಾರತಿ ನಗರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ವಿಕ್ಟೋರಿಯಾ ಮತ್ತು ವಾಣಿ ವಿಲಾಸ ಆಸ್ಪತ್ರೆಯ ಯೋಜನೆಯ ಕಟ್ಟಡದ ಮೂಲ ಅಂದಾಜು ಯಾವಾಗ ಮಂಜೂರಾತಿ ಪಡೆಯಿತು ?

ಆ) ಯಾವಾಗ ಕೆಲಸಗಳನ್ನು ಪ್ರಾರಂಭಿಸಲಾಯಿತು ?

ಇ) ಇದಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು ?

೧) ವಿಕ್ಟೋರಿಯಾ ಆಸ್ಪತ್ರೆ.

೨) ವಾಣಿ ವಿಲಾಸ ಆಸ್ಪತ್ರೆ.

ಈ) ಈವರೆಗೆ ಮುಗಿದಿರುವ ನೆಲ ಅಂತಸ್ತುಗಳು ಎಷ್ಟು ?

೧) ವಿಕ್ಟೋರಿಯಾ ಆಸ್ಪತ್ರೆ.

೨) ವಾಣಿ ವಿಲಾಸ ಆಸ್ಪತ್ರೆ.

ಉ) ಪರಿಷ್ಕೃತ ಅಂದಾಜಿನ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿಲ್ಲ. ಯೋಜನೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಲು ೧೯೮೧ನೇ ಫೆಬ್ರವರಿಯಲ್ಲಿ ಸರ್ಕಾರಿ ಆಜ್ಞೆ ಸಂಖ್ಯೆ ಹೆಚ್.ಎಫ್.ಡಬ್ಲ್ಯೂ ೨೮ ಬಿ.ಆರ್.ಎ ೮೦ ದಿನಾಂಕ ೧೦-೪-೮೧ರ ಆಜ್ಞೆಯು ಮೂಲಕ ದೊರೆಯಿತು.

ಆ) ೧೯೮೧ರ ಆಗಸ್ಟ್ ತಿಂಗಳಿನಲ್ಲಿ.

ಇ) ೧) ವಿಕ್ಟೋರಿಯ ರೂ. ೨೪೬.೯೭ ಲಕ್ಷ.

೨) ವಾಣಿ ವಿಲಾಸ ರೂ. ೧೧೬.೧೭ ಲಕ್ಷ.

ಒಟ್ಟು ರೂ. ೩೫೪.೧೪ ಲಕ್ಷ.